**ದಿನಾಂಕಃ 03.04.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.**

ಹೆಸರುಃ ವಿನುತಾ

ಗಂಡನ ಹೆಸರುಃ ಗಣೇಶ್

ವಯಸ್ಸುಃ 41

ವೃತ್ತಿಃ ಗೃಹಿಣಿ

ವಾಸಃ ಕೋಡಿಹಳ್ಳಿ, ಬೆಂಗಳೂರು

**ಮುಖ್ಯವಿಚಾರಣೆಃ ಶ್ರೀ.ಎಸ್.ಕೆ ವಕೀಲರಿಂದ ಆರೋಪಿಯ ಪರವಾಗಿ.**

ನಾನು ಪಿರ್ಯಾದಿಗೆ ಯಾವುದೇ ಚೆಕ್ ನೀಡಿರುವುದಿಲ್ಲ ಮತ್ತು ಅವರ ಜೊತೆ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ಪಿರ್ಯಾದಿಯ ಜೊತೆ ವ್ಯವಹಾರ ಮಾಡಿರುವುದಾಗಿ ಮತ್ತು ಅದಕ್ಕೆ ಸಂಬಂಧಿಸಿದಂತೆ ಭದ್ರತೆಗಾಗಿ ಒಂದು ಚೆಕ್ಕನ್ನು ನೀಡಬೇಕು ಎಂದು ನನ್ನ ಅಣ್ಣ ಧನಂಜಯ ರೆಡ್ಡಿಯವರು ನನ್ನ ಬಳಿ ನಿಪಿಃ1 ಮತ್ತು 2 ನ್ನು ಪಡೆದಿದ್ದರು. ಆದರೆ ಪಿರ್ಯಾದಿಯಿಂದ ನನಗೆ ನೋಟೀಸ್ ತಲುಪಿರುತ್ತದೆ. ನಂತರ ನಾನು ಪಿರ್ಯಾದಿಗೆ ಕರೆ ಮಾಡಿ ನನಗೂ ಮತ್ತು ಈ ವ್ಯವಹಾರಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಹಾಗೂ ಧನಂಜಯ ರೆಡ್ಡಿಯವರ ಜೊತೆ ಮಾತನಾಡಿ ಎಂದು ತಿಳಿಸಿರುತ್ತೇನೆ. ಪಿರ್ಯಾದಿಯು ಇದರ ಬಗ್ಗೆ ಧನಂಜಯ ರೆಡ್ಡಿಯವರ ಜೊತೆ ಮಾತನಾಡಿ ಎಂದು ತಿಳಿಸಿರುತ್ತಾರೆ. ನ್ನನ ಅಣ್ಣ ಕಷ್ಟದಲ್ಲಿ ಇದ್ದೇನೆ ಎಂದು ನನಗೆ ತಿಳಿಸಿದ ಕಾರಣ ಭದ್ರತೆಗಾಗಿ ನಿಪಿಃ1 ಮತ್ತು 2 ನ್ನು ನಾನು ನೀಡಿರುತ್ತೇನೆ. ನಾನು ಪಿರ್ಯಾದಿಯಿಂದ ಯಾವುದೇ ರೀತಿಯ ಹಣ ಪಡೆದಿಲ್ಲ. ಆದ್ದರಿಂದ ದೂರನ್ನು ವಜಮಾಡಿ ನನ್ನನ್ನು ಬಿಡುಗಡೆ ಮಾಡಿ ಎಂದು ಕೋರುತ್ತೇನೆ.

**ವಕೀಲರ ವಿನಂತಿಯ ಮೇರೆಗೆ ಪಾಟೀಸವಾಲಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು ಹಾಗೂ
24 ನೇ ಎಸಿಎಂಎಂ, ಬೆಂಗಳೂರು.